International Journal of Kannada Research
www.kannadajournal.com

**ISSN: 2454–5813**
IJKR 2020; 6(1): 71-73
© 2020 IJKR
www.kannadajournal.com
Received: 01-11-2019
Accepted: 03-12-2019

**ಮಣಿಶ್ರೀ**
ಸಂಶೋಧನಾ ವಿದ್ಯಾರ್ಥಿನಿ
ಕನ್ನಡ ವಿಭಾಗ ಮದರಾಸು
ವಿಶ್ವವಿದ್ಯಾಲಯ ಮರೀನಾ
ಆವರಣ, ಚೆನ್ನೈ– 600 005

**Corresponding Author:**
**ಮಣಿಶ್ರೀ**
ಸಂಶೋಧನಾ ವಿದ್ಯಾರ್ಥಿನಿ
ಕನ್ನಡ ವಿಭಾಗ ಮದರಾಸು
ವಿಶ್ವವಿದ್ಯಾಲಯ ಮರೀನಾ
ಆವರಣ, ಚೆನ್ನೈ– 600 005

# ವಿಭಾ ಮತ್ತು ವೀಣಾ ಬನ್ನಂಜೆಯವರ ಕಾವ್ಯಗಳಲ್ಲಿ ಜೀವನ ಮೌಲ್ಯಗಳು

**ಮಣಿಶ್ರೀ**

ಸಾಹಿತ್ಯದ ರಸಾನುಭೂತಿ ಓದುಗರಿಗೆ ಮನಸ್ಸಿಗೆ ಆಹ್ಲಾದವನ್ನುಂಟು ಮಾಡುತ್ತದೆ. ಅದರ ಜೊತೆ ಜೊತೆಗೇ ಸಾಹಿತಿಯ ಚಿಂತನೆಗಳನ್ನು ಭಾಷೆಯ ಮೂಲಕ ಅಭಿವ್ಯಕ್ತಿಗೊಳಿಸುತ್ತದೆ. ಅಂತಹ ಚಿಂತನೆಗಳನ್ನು ತಮ್ಮ ಕತೆ, ಕಾದಂಬರಿ, ನಾಟಕ, ಕಾವ್ಯ ಮುಂತಾದ ಪ್ರಕಾರಗಳಿಂದ ಸಹೃದಯರಿಗೆ ತಲುಪಿಸುವ ಸಾಹಿತಿ ಬದುಕಿಗೆ ಆವಶ್ಯಕವಾದ ಮೌಲ್ಯಗಳನ್ನು ಅಲ್ಲಲ್ಲಿ ವ್ಯಕ್ತಪಡಿಸುತ್ತಾನೆ. ಆಧುನಿಕ ಮಹಿಳಾ ಕಾವ್ಯಗಳಲ್ಲಿ ಈ ರೀತಿಯ ಮೌಲ್ಯಗಳು ಪರಿಣಾಮಕಾರಿಯಾಗಿ ಮೂಡಿಬಂದಿವೆ. ವಿಭಾ ಅವರ 'ಜೀವ ಮಿಡಿತದ ಸದ್ದು' ಮತ್ತು ವೀಣಾ ಬನ್ನಂಜೆಯವರ 'ಅಕ್ಕನ ಹಾದಿ' ಕಾವ್ಯ ಸಂಕಲನಗಳಲ್ಲಿಯ ಕವಿತೆಗಳಲ್ಲಿ ಅನಾರಣಗೊಂಡಿರುವ ಜೀವನ ಮೌಲ್ಯಗಳನ್ನು ಪ್ರಸ್ತುತ ಪ್ರಬಂಧದಲ್ಲಿ ಚರ್ಚಿಸಲಾಗುವುದು. ವಿಭಾ ಚಿಕ್ಕವಯಸ್ಸಿಗೇ ಅಕಾಲ ಮರಣಕ್ಕೆ ತುತ್ತಾದ ಪ್ರತಿಭಾನ್ವಿತ ಕವಯಿತ್ರಿ. ಇವರ 'ಜೀವ ಮಿಡಿತದ ಸದ್ದು' ಸಂಕಲನದಲ್ಲಿಯ ಕವನಗಳು ವೈಶಿಷ್ಟ್ಯಪೂರ್ಣವಾಗಿವೆ. ವೀಣಾ ಬನ್ನಂಜೆ ಅತ್ಯಂತ ಪ್ರತಿಭಾನ್ವಿತ ಮತ್ತು ತೀಕ್ಷ್ಣ ವಿಚಾರಧಾರೆಗಳಿಂದ ಕನ್ನಡ ಕಾವ್ಯ ಲೋಕದಲ್ಲಿ ತಮ್ಮದೇ ಆದ ಛಾಪು ಮೂಡಿಸಿದಂತಹವರು. ಇವರ 'ಅಕ್ಕನ ಹಾದಿ' ಸಂಕಲನದಲ್ಲಿಯ ಕವನಗಳು ನಮ್ಮನ್ನು ಭಿನ್ನವಾದ ಚಿಂತನೆಯ ಒರೆಗೆ ಹಚ್ಚುತ್ತವೆ.

**ವಿಭಾ ಅವರ "ಜೀವ ಮಿಡಿತದ ಸದ್ದು" ಸಂಕಲನದ ಕವಿತೆಗಳಲ್ಲಿ ಜೀವನ ಮೌಲ್ಯಗಳು**

"ನಾವು,
ಎದೆಯೊಳಗೆ ಬಯಲು
ತುಂಬಿಕೊಂಡವರು
ಅನಂತ ಅವಕಾಶಕ್ಕೆ
ಸವಾಲೊಡ್ಡಿದವರು
ನಮ್ಮ ಬೊಗಸೆಯಲ್ಲಿದೆ ಭೂಮಿ"(ವಿಭಾ ೨೦೧೩ : ೨೫).

'ಬೊಗಸೆಯಲ್ಲಿದೆ ಭೂಮಿ' ಕವನದಲ್ಲಿ ವಿಭಾ ಆಧುನಿಕ ಸ್ತ್ರೀಯರು ಈಗ ಯಾವ ಸವಾಲುಗಳಿಗೂ ಹೆದರದೆ ನಿಲ್ಲುವವರು ಎನ್ನುವ ಸಂದೇಶವನ್ನು ಸಾರುತ್ತಾರೆ.

"ಈಗ ನಮಗೆ ಗಡಿಗಳ ಮಿತಿಯಿಲ್ಲ
ಭಾಷೆ ಧರ್ಮಗಳ ತೊಡರಿಲ್ಲ
ಲಿಂಗಭಾವಗಳ ಭೇದವಿಲ್ಲ

ಇಡೀ ಜಗವ ಹೊತ್ತು ನಿಂತಿದ್ದೇವೆ"(ವಿಭಾ ೨೦೧೩ : ೨೫)

ಈ ಸಾಲುಗಳು ಸ್ತ್ರೀಯರ ಸ್ಥೈರ್ಯವನ್ನು ಗುರುತಿಸುವುದರ ಜೊತೆಗೇ ಇನ್ನು ಮುಂದೆ ಮಹಿಳೆಯರು ಹೇಗಿರಬೇಕು ಎನ್ನುವ ಕಿವಿಮಾತನ್ನು ಸೂಚ್ಯವಾಗಿ ತಿಳಿಸುತ್ತವೆ. ಭಾಷೆ, ಧರ್ಮಗಳನ್ನು ರಾಜ್ಯ, ದೇಶಗಳ ಗಡಿಗಳನ್ನು ದಾಟಬೇಕು. ಸ್ತ್ರೀಪುರುಷರ ಭೇದವನ್ನು ಎದುರಿಸಿ ಇಡೀ ಪ್ರಪಂಚಕ್ಕೆ ಆದರ್ಶಪ್ರಾಯರಾಗಬೇಕೆಂಬ ಮಾತುಗಳು ಯಾವುದೋ ಕಟ್ಟುಪಾಡುಗಳಿಗೆ ಅರಿವಿಲ್ಲದಂತೆಯೇ

ಸಿಕ್ಕಿಹಾಕಿಕೊಂಡು ಬದುಕಿನ ಪೂರ್ತಿ ಬಂಧಿಯಾಗಿರುವ ಬದಲು ಅವುಗಳನ್ನೆಲ್ಲ ದಾಟಿ ಹೊರಬಂದು ಜಗತ್ತನ್ನು ನೋಡಬೇಕು. ಅಲ್ಲಿನ ಅವ್ಯವಸ್ಥೆಯನ್ನು ಸರಿಪಡಿಸಿ ಜವಾಬ್ದಾರಿಯನ್ನು ಹೊರಬೇಕು ಎಂಬ ಆಶಯವನ್ನು ಕವನದಲ್ಲಿ ಕಾಣಬಹುದಾಗಿದೆ.

"ನೀನು ಮರಳಿ ಬರಬಹುದು
ದೀರ್ಘ ಕಾಲದ ನಂತರ
ಆದರೇನು ಮಾಡುವುದು?"
"ಪ್ರೀತಿ ನನಗೀಗ ಕೊನೆಯಿಲ್ಲದ
ಒಂದು ಹುಡುಕಾಟವಾಗಿಬಿಟ್ಟಿದೆ"
"ನೀನೆ ಹೇಳು
ನೀ ಮರಳಿದರೂ ನಾ
ಮರಳಬಲ್ಲನೇ ಮತ್ತದೇ
ಮಕಾಮಿಗೆ?"(ವಿಭಾ 2013 : 33)

'ಊರ್ಮಿಳೆಯ ಸ್ವಗತ' ಕವನದಲ್ಲಿ ತನ್ನನ್ನು ಬಿಟ್ಟು ಹೋದ ಪ್ರಿಯಕರ ಅಥವಾ ಪತಿ ಬಹಳ ಕಾಲದ ನಂತರ ಮರಳಿ ಬರುವ ಚಿತ್ರಣವಿದೆ. ಅವನಲ್ಲಿ ಹಿಂದಿನ ಪ್ರೀತಿ ಉಳಿದಿದ್ದರೂ ಅವನಿಗಾಗಿ ಕಾದು, ಕಾದು ಕೊನೆಗೆ ಕಲ್ಲಾಗಿ ಹೋದ ಸ್ತ್ರೀಯರ ಮನಸ್ಸಿನ ತಲ್ಲಣಗಳನ್ನು ವಿಭಾ ಬಹಳ ಚೆನ್ನಾಗಿ ಪ್ರಕಟಿಸಿದ್ದಾರೆ. 'ಪ್ರೀತಿ ನನಗೀಗ ಕೊನೆಯಿಲ್ಲದ ಹುಡುಕಾಟವಾಗಿಬಿಟ್ಟಿದೆ' ಎನ್ನುವ ಸಾಲಿನಲ್ಲಿ ಪುನಃ ಹಳೆಯ ಪ್ರೀತಿಗೆ ಮರಳದೆ ಬೇರೆಡೆ ಹುಡುಕಾಡುತ್ತಿರುವ ನೋವು ಪ್ರತಿಫಲಿಸಿದೆ.
ಪ್ರೀತಿಯನ್ನು ಕಳಕೊಂಡ ಹೆಣ್ಣುಮಕ್ಕಳು ಭಗ್ನಪ್ರೇಮದಿಂದ ಹೊರಬಂದು ಬದುಕಿನ ಬೇರೆ ಬೇರೆ ಮಜಲುಗಳಿಗೆ ತಮ್ಮನ್ನು ತಾವು ತೆರೆದುಕೊಳ್ಳಬೇಕು. ಅದಕ್ಕಿಂತಲೂ ಇನ್ನೂ ಹೆಚ್ಚಿನದು ಬದುಕಿನಲ್ಲಿ ಏನೇನೋ ಇವೆ. ಅಂತಹ ಸಾಧ್ಯತೆಗಳನ್ನು, ವಿಸ್ತಾರವಾದ ಅವಕಾಶಗಳನ್ನು ಬಳಸಿಕೊಳ್ಳಬೇಕು ಎಂಬ ಬದುಕಿನ ಮೌಲ್ಯಕ್ಕೆ ಕವಯಿತ್ರಿ ಒತ್ತುಕೊಟ್ಟಿರುವುದು ಇಲ್ಲಿ ಗಮನಕ್ಕೆ ಬರುತ್ತದೆ. 'ನೀ ಮರಳಿದರೂ ನಾ ಮರಳಬಲ್ಲೆನೆ ಮತ್ತದೇ ಮಕಾಮಿಗೆ?' ಎನ್ನುವ ನಿರ್ಭಾವುಕ ಸಾಲುಗಳಂತೂ ಬದುಕೆಲ್ಲ ತಮ್ಮ ಮನಸ್ಸಿನ ಭಾವನೆಗಳನ್ನು ತಡೆದು ಮನದ ಹೋರಾಟಗಳನ್ನು ಹತ್ತಿಕ್ಕಿದ ಹೆಣ್ಣು ಮಕ್ಕಳ ನೋವನ್ನು ಅತ್ಯಂತ ಯಶಸ್ವಿಯಾಗಿ ಎತ್ತಿಹಿಡಿದಿದೆ. ಹಾಗೆಯೇ ಅಂತಹ ಪರಿಸ್ಥಿತಿಗೆ ದೂಡಿದವನ ಮೇಲಿನ ತಿರಸ್ಕಾರವನ್ನೂ ಬಹಳ ಚೆನ್ನಾಗಿ ಒಡಮೂಡಿಸಿದೆ.

"ಬರೆಯಲು ಕೂತ ಈ ಗಳಿಗೆ
ನನ್ನೊಳಗಿನ ಜೀವ ಕೇಳುತ್ತಿದೆ
ಯಾಕೆ ತಲ್ಲಣಿಸಲಿಲ್ಲ ನೀನು
ಆ ನಿಶ್ಚಲ ದೇಹದೆದುರು?
ಕನಿಕರವಿದೆ ನನಗೆ

ನಿನ್ನೊಳುಂಟಾದ ಆಕ್ಷಣದ ನಿರಾಳತೆಗೆ?"(ವಿಭಾ 2013 : 41)
'ಆ ಗಳಿಗೆಯ ಸತ್ಯ' ಕವನದಲ್ಲಿ ಬಾವಿಗೆ ಬಿದ್ದ ಪುಟ್ಟ ಮಗು ಸತ್ತುಹೋಗಿರುತ್ತದೆ. ಅದು ಯಾರದು? ಎನ್ನುವ ಕುತೂಹಲದ ಜೊತೆಗೆ ತಮ್ಮ ಮಗುವೇ ಎನ್ನುವ ಹೆದರಿಕೆಯಲ್ಲಿ ಕವಯಿತ್ರಿ ಆ ದೇಹವನ್ನು ನೋಡಿ ತಾವು ಅಂದುಕೊಂಡ ತಮ್ಮ ಕಡೆಯ ಮಗುವಲ್ಲ ಎಂದು ನಿರಾಳವಾಗುತ್ತಾರೆ. ಈ ಸನ್ನಿವೇಶ ಬೇರೊಂದು ದಿನ ಬರೆಯಲು ಕುಳಿತಾಗ ನೆನಪಾಗುತ್ತದೆ. ಆ ನಿರಾಳತೆಗೆ ಅವರ ಮನಸ್ಸೇ ಅವರನ್ನು ಜರಿಯುತ್ತದೆ. ಪ್ರಸ್ತುತ ದಿನಗಳಲ್ಲೂ ಯಾರೋ ಅಪಘಾತದಲ್ಲಿ ನರಳುತ್ತಿದ್ದಾಗ ತಮ್ಮವರಲ್ಲದಿದ್ದರೆ ಸಹಾಯ ಮಾಡದಿರುವ ಅಥವಾ ಅಲ್ಲಿನ ಸನ್ನಿವೇಶವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿ, ಸೋಷಿಯಲ್ ಮೀಡಿಯಾದಲ್ಲಿ ಹರಿಯಬಿಡುವ ಜನರು ಯಾವುದೇ ರೀತಿಯ ಸಹಾಯಕ್ಕೆ ಧಾವಿಸದೆ ಸುಮ್ಮನಾಗುವ ಸನ್ನಿವೇಶ ದಿನನಿತ್ಯ ನಡೆಯುತ್ತಿದೆ. ಕಷ್ಟದಲ್ಲಿರುವಾಗ ನಮ್ಮವರು, ಇತರರು ಎಂದು ನೋಡದೆ ಸಹಾಯ ಮಾಡುವ ಮೌಲ್ಯವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕವಯಿತ್ರಿ ಆತ್ಮಾವಲೋಕನ ಮಾಡುತ್ತಲೇ ಸಾರಿದ್ದಾರೆ.

"ಹಾಡುಗಳ ಲೋಕದಾ ಹುಡುಗಿ
ಹಾಡುತ್ತಿರು, ದಿನಕ್ಕೊಂದು ಪದಕಟ್ಟಿ
ಯಾರದೋ ಅಕ್ಷರ, ಯಾರದೋ ಮಾತು
ಬದುಕಿನ ಗುರಿಗೆ ನೂರೆಂಟು ದಾರಿಗಳಿದ್ದರೇನು?
ನಿನಗೆ ನೀ ತುಳಿದದ್ದೇ ದಾರಿ
ನೀ ಕಂಡುಕೊಂಡದ್ದೇ ಗುರಿ
ನಿನ್ನ ಹಾದಿಗೆ ನೀನೆ ಬೆಳಕು..."(ವಿಭಾ 2013 : 53)

'ಕಡಲ ವಿಸ್ತಾರದ ಒಡಲು' ಕವನದಲ್ಲಿ ಇತರರನ್ನು ಆಶ್ರಯಿಸದೆ ಅವರವರ ಗೆಲುವಿಗೆ ಅವರವರೇ ಹೋರಾಡಬೇಕು ಎನ್ನುವ ಅತ್ಯಮೂಲ್ಯ ಜೀವನ ಮೌಲ್ಯವನ್ನು ಕವಯಿತ್ರಿ ಬಿಂಬಿಸಿದ್ದಾರೆ. 'ನಿನ್ನ ಹಾದಿಗೆ ನೀನೆ ಬೆಳಕು', 'ನೀ ಕಂಡುಕೊಂಡದ್ದೇ ಗುರಿ' ಎನ್ನುವ ಸಾಲುಗಳು ಪ್ರತಿಯೊಬ್ಬರನ್ನೂ ಹುರಿದುಂಬಿಸಿ, ಗೆಲ್ಲುವ ಛಲ ಮೂಡಿಸುವ ಮಾತುಗಳಾಗಿವೆ.

**ವೀಣಾ ಬನ್ನಂಜೆಯವರ 'ಅಕ್ಕನ ಹಾದಿ' ಸಂಕಲನದ ಕವನಗಳಲ್ಲಿ ಜೀವನ ಮೌಲ್ಯಗಳು**

"ಉಂಡವರು ತಿಂದವರು
ಉಳಿಸಿದರು ಅಳಿಸಿದರು
ವರೆಸಿ ಗುಡಿಸಿ ತೊಳೆದರೂ
ಅಳಿಯದಂಥ ಹೆಜ್ಜೆ ಗುರುತು"(ವೀಣಾ ಬನ್ನಂಜೆ 2010 : 37)
"ಬಚ್ಚಿಟ್ಟೆ ಅಲ್ಲಿ ಗುಪ್ತನಿಧಿ
ನಾನಿರುವೆನಿಲ್ಲಿ ಅಂತರದಲ್ಲಿ
ಇದೋ ಬೀಗದ ಕೈ – ಹೇ ಕಾವಲುಗಾರ
ಬಿಡಬೇಡ ನಿನ್ನ ಹೊರತು ಒಳಗೆ
ನೀ ನಡೆಯಬೇಡ ಹೊರಗೆ"(ವೀಣಾ ಬನ್ನಂಜೆ 2010 : 38)

'ಸುಮ್ಮನೆ' ಕವನದಲ್ಲಿ ಬದುಕಿನಲ್ಲಿ ಬಹಳ ಜನ ಬಂದು ಹೋಗುತ್ತಾರೆ. ಆದರೆ ಮನದಾಳದಲ್ಲಿ ಅಡಗಿರುವ ಗುಪ್ತನಿಧಿಯಂತಹ ರಹಸ್ಯಗಳನ್ನು ಯಾರೂ ಅರಿಯಲು ಸಾಧ್ಯವಿಲ್ಲ ಎನ್ನುವುದನ್ನು ಮನೆಯೆನ್ನುವ ರೀತಿ ಸಮೀಕರಿಸಿ ಬಹಳ ಸುಂದರವಾಗಿ ಬಿಂಬಿಸಲಾಗಿದೆ. ಹಾಗೆಯೇ ಅಂತರಾಳವನ್ನು ಕಾಯುವ ಕೆಲಸವನ್ನೂ ಕಾವಲುಗಾರನಿಗೆ ವಹಿಸಿದ್ದಾರೆ. ಇಲ್ಲಿ ಆಂತರ್ಯವನ್ನು ಅರಿಯುವವರು ಬರುವವರೆಗೆ ಕಾಯಬೇಕು. ಜೀವನದಲ್ಲಿ ಭೇಟಿಯಾಗುವ ಎಲ್ಲರೂ ನಂಬಿಕೆಗೆ ಅರ್ಹರಲ್ಲ ಎನ್ನುವ ತತ್ವ ಅಡಗಿದೆ.

"ನಾನಿನ್ನ ಮಗುವಿರಬಹುದು
ನನಗೀಗ ಸಾವಿರದ ಸಂತಾನ
ಬಗಲಲಿ ಹೊತ್ತು ನೀನಲಿದೆ
ನಾನೀಗ ಹೆಗಲು ಕೊಡಬೇಕು ನಿನ್ನ ಶವಕೆ"(ವೀಣಾ ಬನ್ನಂಜೆ 2010 : 44)
"ಬಿಟ್ಟುಬಿಡು ನನ್ನನ್ನು ನನ್ನಷ್ಟಕ್ಕೆ
ಕೊಟ್ಟುಬಿಡು ನನ್ನನ್ನು

ನಿನ್ನನ್ನು ಹೆತ್ತ ಆ ತಾಯಿಗೆ!"(ವೀಣಾ ಬನ್ನಂಜೆ 2010 : 45)

'ತಾಯಿಗೆ' ಕವನದಲ್ಲಿ ಹುಟ್ಟಿದ ಮಗು ಸದಾ ತನ್ನ ಹತ್ತಿರವೇ ಇರಬೇಕು ಎನ್ನುವ ವಾಂಛಲ್ಯವನ್ನು ತಂದೆ ತಾಯಿ ಬಿಡಬೇಕು ಎಂದು ವೀಣಾ ಹೇಳುತ್ತಾರೆ. ಇದರಲ್ಲಿ ಸೈನಿಕನೊಬ್ಬ ದೇಶಕಾಯಲು ತನ್ನನ್ನು ಸಮರ್ಪಿಸಲು ತಾಯಿಗೆ ಹೇಳುತ್ತಾನೆ. ದೇಶಭಕ್ತಿ, ಸ್ವಾರ್ಥ ಬಿಡುವ ತಾಯಿ ಇಷ್ಟೆಲ್ಲ ಚಿತ್ರಿತವಾಗಿದ್ದರೂ 'ನೀನು ಮಡಿಲಲ್ಲಿ ಆಡಿಸಿದ್ದರೂ ನಾನು ನಿನ್ನ ಶವಕ್ಕೆ ಹೆಗಲು ಕೊಡಬೇಕು' ಎಂಬ ನಿಷ್ಠುರ ವಾಸ್ತವ ಪ್ರತಿಪಾದಿಸುವ ಮಗನ ಮಾತುಗಳು ತಾಯಿ ಮಮತೆಯನ್ನು ನಿಯಂತ್ರಿಸಿಕೊಳ್ಳಲು ಹೇಳುವ ನಿವೇದನೆಯಾಗಿವೆ. ಭಾವನೆಗಳು ಬದುಕನ್ನು ಉತ್ತಮಗೊಳಿಸಬೇಕು. ಜೀವನವನ್ನು ಹಸನುಗೊಳಿಸುವತ್ತ ಹೊರಳಿಸಿಕೊಳ್ಳಬೇಕೆನ್ನುವ ಮೌಲ್ಯವನ್ನು ವೀಣಾ ಅದ್ಭುತವಾಗಿ ಪ್ರತಿಪಾದಿಸಿದ್ದಾರೆ.

"ದೇವಲೋಕಕೆ ನಿನ್ನನೊಯ್ದು
ಅದನೊಂದು ಗುಡಿಮಾಡಿ
ನಿನ್ನನೇ ದೇವಪೀಠದಲಿ ಕುಳ್ಳಿರಿಸಿ
ನನ್ನ ದೇವರು ನೀನೆಂದು ಅವರಿಗೆಲ್ಲ
ನನ್ನ ಪೂಜೆಯ ಪರಿ ತೋರಬೇಕಿತ್ತು!"
"ಆದರೆ ನೀನು ಮಾತ್ರ
ಆ ಲೋಕವನ್ನಲ್ಲ ನಿನ್ನದೇ
ಕಟ್ಟಿಕೊಂಡ ಮನೆ ಅಪ್ಪ ಅಮ್ಮ ಗೆಳೆಯ

ಹಾಗೆ ಅವರೊಳಗೆ ಉಳಿದುಹೋದೆ!"(ವೀಣಾಬನ್ನಂಜೆ 2010 : 53)

'ಪ್ರೇಮಸಿರಿ' ಕವನದಲ್ಲಿ ಪ್ರೇಮಿಯನ್ನು ಪರಿಪರಿಯಾಗಿ ದೇವರಂತೆ, ಮೂರುಲೋಕದ ಒಡೆಯರಂತೆ, ಸ್ವರ್ಗದಲ್ಲಿ ಮೆರೆಸುವಂತೆ ಕಲ್ಪನೆ ಮಾಡಿಕೊಳ್ಳುವುದನ್ನು ವಿವರಿಸಲಾಗಿದೆ. ಮಗುವನ್ನು ಪ್ರೀತಿಸುವ ಹೆತ್ತವರ ಪ್ರೀತಿಗೂ ಮೀರಿ ಹಣ ಸಂಪಾದನೆಯ ಹುಚ್ಚಿನಲ್ಲಿರುವವರಿಗಿಂತಲೂ ದೊಡ್ಡ ಐಸಿರಿ ತನ್ನ ಪ್ರೇಮಸಿರಿ ಎಂದು ಭಾವಿಸುವವನು. ತನ್ನನ್ನು ತನ್ನ ಪ್ರೀತಿಯನ್ನು ಪರಿಪೂರ್ಣವಾಗಿ ಒಪ್ಪಿಕೊಳ್ಳದೆ ತನ್ನದೇ ಸಂಬಂಧಗಳ ವರ್ತುಲದಲ್ಲಿ ಮುಳುಗಿ ಹೋದವಳ ಬಗ್ಗೆ ನಿರಾಶನಾಗುತ್ತಾನೆ.

ಇದು ಒಬ್ಬ ಪ್ರೇಮಿಯ ಪ್ರೇಮಾಲಾಪದಂತೆ ಕಾಣುವುದಾದರೂ ಬದುಕಿನ ಸಂಬಂಧಗಳ ಸುಳಿಯಲ್ಲೇ ಮುಳುಗಿ ಅಮೂಲ್ಯವಾದುದನ್ನು ಮರೆಯಬಾರದು ಎನ್ನುವ ಮೌಲ್ಯವನ್ನು ನೀತಿ ಪಾಠವನ್ನು ಇಲ್ಲಿ ಅರಿಯಬಹುದಾಗಿದೆ. ಬೇರೆಲ್ಲ ಲೌಕಿಕ ವಿಷಯಗಳಿಗಿಂತಲೂ ಮೀರಿದ ಅಲೌಕಿಕ ಸಾಧನೆಯನ್ನು ಅರಿಯುವ ಕಡೆ ಗಮನಹರಿಸಬೇಕೆಂಬ ಸೂಚನೆಯನ್ನು ಕವಯಿತ್ರಿ ಪ್ರಕಟಪಡಿಸುತ್ತಾರೆ. ಅದನ್ನು ಜನರು ಮರೆತಿರುವ ನಿರಾಶೆಯೂ, ಅದಕ್ಕಾಗಿ ಕಾಯುವಿಕೆಯೂ ಸಮರ್ಥವಾಗಿ ಅನಾವರಣಗೊಂಡಿದೆ.

ಬದುಕಿಗೆ ಬೇಕಾಗುವ ಮೌಲ್ಯಗಳನ್ನು ಈ ಇಬ್ಬರು ಕವಯಿತ್ರಿಯರು ವಿಶಿಷ್ಟವಾಗಿ ಒಡಮೂಡಿಸಿರುವುದನ್ನು ಮೇಲಿನ ಕವನದಲ್ಲಿ ನೋಡಬಹುದು. "ಜೀವನದ ಮೌಲ್ಯಗಳಿಗೆ ಆನಂದದ ಲೇಪನವನ್ನಿತ್ತು ಮನಸ್ಸನ್ನು ಅಳಿಸುವುದರ ಜೊತೆಗೆ ಅದನ್ನು ಬೆಳೆಸಲೂ ಕಾರಣವಾಗುತ್ತದೆ ಸಾಹಿತ್ಯ" (ಎಚ್.ತಿಪ್ಪೇರುದ್ರಸ್ವಾಮಿ 1987: 32) ಯವುದೇ ಸಾಹಿತ್ಯ ಆನಂದವನ್ನು, ರಸಾನುಭೂತಿಯನ್ನು ಕೊಡುವುದರ ಜೊತೆಗೆ ಬದುಕನ್ನು ಬದಲಿಸುವ ಶಕ್ತಿಯನ್ನೂ ಹೊಂದಿರುತ್ತದೆ.

ವಿಭಾ ತಮ್ಮ ಕವನಗಳಲ್ಲಿ ಪ್ರತಿ ವಿಷಯವನ್ನು ಭಾವಪೂರ್ಣವಾದ ಚಿಂತನೆಗಳಿಗೆ ಒಳಪಡಿಸಿದ್ದಾರೆ. "ಕಳಕೊಂಡ ಮೌಲ್ಯವೊಂದರ ಹುಡುಕಾಟದ, ಆಳವಾದ ನೋವು ವಿಭಾಳ ಕಾವ್ಯಪ್ರೇಮದ ಮುಖ್ಯ ಧ್ವನಿಯಾಗಿದೆ"(ಮುನ್ನುಡಿಯಿಂದ, ವಿಭಾ 2013 : 9) ಎಂದು ಜಯಂತ ಕಾಯ್ಕಿಣಿ ಸೂಕ್ತವಾಗಿ ಗುರುತಿಸಿದ್ದಾರೆ. ವೀಣಾ ಬನ್ನಂಜೆಯವರ ಕವನಗಳಲ್ಲಿ ಎಲ್ಲವನ್ನೂ ಭಿನ್ನ ದೃಷ್ಟಿಕೋನದಲ್ಲಿ ನೋಡುವ ಗುಣವಿದೆ, ದಿಟ್ಟತನವಿದೆ, ತಾಜಾತನವಿದೆ. ಭಾಷೆಯಲ್ಲಿ ವಿಭಾರವರಿಗಿಂತ ನಿಷ್ಠುರ ಶೈಲಿಯಲ್ಲಿ ಭಾವಗಳ ಅನಾವರಣವಾಗಿದೆ. ಇಬ್ಬರ ಕವನಗಳಲ್ಲೂ ಮೌಲ್ಯಗಳು ಸಮಾಜಪರ ಕಾಳಜಿಯಿಂದ ಕೂಡಿವೆ. ಸಮಸ್ಯೆಗಳಿಗೆ ವಿನೂತನ ರೀತಿಯ ಮಾರ್ಗೋಪಾಯಗಳಿವೆ. ಆಧುನಿಕ ಜಗತ್ತಿನ ತಲ್ಲಣಗಳನ್ನು ಮೆಟ್ಟಿ ನಿಲ್ಲಲು ಬೇಕಾದ ಸಲಹೆಗಳನ್ನು ಮೌಲ್ಯಗಳನ್ನು ಜವಾಬ್ದಾರಿಯುತವಾಗಿ ನೀಡುವಲ್ಲಿ ಎರಡು ಕೃತಿಗಳಲ್ಲೂ ಸಾಮ್ಯತೆಯಿದೆ.

**ಗ್ರಂಥಋಣ**

1. ವಿಭಾ 2013 ಜೀವ ಮಿಡಿತದ ಸದ್ದು, ಲಡಾಯಿ ಪ್ರಕಾಶನ, ಗದಗ.
2. ವೀಣಾಬನ್ನಂಜೆ 2010 ಅಕ್ಕನ ಹಾದಿ, ರವೀಂದ್ರ ಪುಸ್ತಕಾಲಯ, ಸಾಗರ.
೩. ಡಾ.ಎಚ್.ತಿಪ್ಪೇರುದ್ರಸ್ವಾಮಿ 1987 ಸಾಹಿತ್ಯ ವಿಮರ್ಶೆಯ ಮೂಲತತ್ವಗಳು,(ಮೂ.ಮು) ಪ್ರಸಾರಾಂಗ, ಮೈಸೂರು.